ಬಂದು ತುಕ್ಕು ಹಿಡಿದ ತನ್ನ ಮೆದುಳಿಗೆ ಎಚ್ಚರಿಕೆ ನೀಡದಿದ್ದರೆ ಏನಾಗಿರುತ್ತಿತ್ತು ಇಷ್ಟರಲ್ಲಿ...? ಬೆನ್ನ ಹುರಿಯಲ್ಲಿ ಚಳಿಯಾಡಿದಂತಾಯಿತು.

'ಸಾರ್, ನಿಮಗೆ ಧನ್ಯವಾದ ಸೂಚಿಸ್ಬೇಕು, ಸಾರ್. ನನ್ನನ್ನು ನೀವು ಎಚ್ಚರಿಸದೇ ಇರ್ತಿದ್ರೆ ನಾನೂ ಅಪಾಯದಲ್ಲಿ ಸಿಲುಕುತ್ತಿದ್ದೆನೇನೋ? ಸರಿಯಾದ ಸಮಯಕ್ಕೆ ಬಂದು ನನ್ನ ಕಾಪಾಡಿದ್ರಿ' ಗದ್ಗದಿತಳಾಗಿ ಹೇಳುವಾಗ ಅಧಿಕಾರಿ ಮೀಸೆಯಡಿಯಲ್ಲಿಯೇ ನಕ್ಕ.

'ಮೇಡಂ, ನಾವು ಪದೇ ಪದೇ ನಿಮ್ಮನ್ನು ಭೇಟಿಯಾದಾಗ ನಿಮಗೆ ಕಿರಿಕಿರಿ ಅನಿಸ್ತಿತ್ತಲ್ಲವೆ? ನಾವು ನಿಮಗೆ ಅನಗತ್ಯ ತೊಂದ್ರೆ ಕೊಡ್ಬೇಕು ಅನ್ನೋ ದೃಷ್ಟಿಯಲ್ಲಿ ಬರ್ತಿರ್ಲಿಲ್ಲ. ನಿಮಗೆ ಸಹಾಯ ಮಾಡುವುದಕ್ಕೆ ಬರ್ತಿದ್ದೆವು. ಅದನ್ನು ನೀವು ಅರ್ಥ ಮಾಡ್ಕೊಂಡ್ರೆ ಸಾಕು'

'ಸರಿ ಸಾರ್, ಇನ್ನು ಮುಂದೆ ಹಾಗೆಲ್ಲಾ ಮಾಡೋಲ್ಲ. ನೀವು ಲಹರಿಯ ವಿಷಯ ಮಾತನಾಡುವುದಕ್ಕೆ ಯಾವಾಗ ಬೇಕಾದ್ರೂ `ಮೇನಕಾ'ಗೆ ಬರಬಹುದು' ಕೊನೆಗೂ ಅರ್ಥೈಸಿಕೊಂಡವಳಂತೆ ನುಡಿದಾಗ ಇನ್ಸ್‌ಪೆಕ್ಟರ್ ರಾಜಧಾನಿ ಸಮಾಧಾನದ ಉಸಿರು ದಬ್ಬಿದ.

'ಇನ್ನೊಂದು ಮಾತು ಹೇಳೋದಿಕ್ಕೆ ಇಚ್ಛೆಸ್ತೀನಿ. ನೀವು ಒಂಟಿಯಾಗಿ ಹೊರಗೆಲ್ಲೂ ಓಡಾಡುವುದು ಬೇಡ. ಅದೂ ಲಹರಿ ಸಿಗುವವರೆಗೂ. ಈ ಪತ್ರದ ಬಗ್ಗೆ ಯೋಚ್ನೆ ಬಿಟ್ಟು ಬಿಡಿ. ಇದನ್ನು ತನಿಖೆ ನಡೆಸೋದು ನಮ್ಮ ಜವಾಬ್ದಾರಿ' ಭರವಸೆಯ ಮಾತುಗಳು ಬಂದಾಗ ಮೇನಕಾ ನೆಮ್ಮದಿಯಿಂದ ಎದ್ದು ನಿಂತು ಅಧಿಕಾರಿಗೆ ಕೈ ಜೋಡಿಸಿದಳು.

ಇನ್ಸ್‌ಪೆಕ್ಟರ್ ರಾಜಧಾನಿ ಅವಳು ಹೊರಗೆ ಹೋಗುವವರೆಗೂ ನೋಡುತ್ತಾ ಕುಳಿತ. ಅವಳ ಕಾರು ಹೊರಡುತ್ತಲೇ ಇನ್ಸ್‌ಪೆಕ್ಟರ್ ರಾಜಧಾನಿ ಪಿಸಿ ಸಾರಂಗನನ್ನು ಕರೆದ. ಪಿಸಿ ಉತ್ಸಾಹವಿಲ್ಲದವರಂತೆ ಇನ್ಸ್‌ಪೆಕ್ಟರ್‌ನ ಛೇಂಬರಿಗೆ ಬಂದು ನಿಂತ.

'ಪಿಸಿ, ನಾವೀಗ ಮತ್ತದೆ ಹಳೇ ಕಟ್ಟಡಕ್ಕೆ ಹೋಗ್ಬೇಕು'

'ನೀವು ಆ ದಿನ ನನ್ನನ್ನು ಬಿಟ್ಟು ನೀವೊಬ್ರೆ ಹೋಗಿದ್ರಿ, ಅಲ್ಲಿಗೋ?' ಅವನ ಮಾತಿನಲ್ಲಿ ಕುಹಕವಿತ್ತು.

'ಹೌದು, ಅಲ್ಲಿಗೆ ಹೊಗ್ತಾ ಇದ್ದೀವಿ. ಇನ್ನು ಅಲ್ಲಿಗೆ ಸಂಬಂಧಪಟ್ಟ ವ್ಯಕ್ತಿಗಳಿಗೆ ನೀನು ವಿಷಯ ತಿಳಿಸ್ಬೇಡ'

'ಸಾರ್, ನಾನೆಲ್ಲಿ ತಿಳಿಸ್ತೀನಿ' ಬೇಸರದ ದನಿಯಲ್ಲಿ ಹೇಳಿದ.

'ನಾನು ಯಾಕೆ ಹೇಳ್ತಿದ್ದೇನೆಂದ್ರೆ ಕೆಲವೊಂದು ವಿಷಯಗಳು ನಮ್ಮನ್ನು ಮೀರಿ ಹೊರಗಿನವರ ಕಿವಿಗೆ ಬೀಳುತ್ತೆ. ಅದಕ್ಕೆ ಹೇಳ್ದೆ' ಅಧಿಕಾರಿಯ ಮಾತು ಮುಗಿಯುವಷ್ಟರಲ್ಲಿ ಫೋನ್ ಕಾಲ್ ಬಂತು. ಅದನ್ನು ರಿಸೀವ್ ಮಾಡಿದ ಅಧಿಕಾರಿ. ಆ ಕಡೆಯಿಂದ ಹೆಣ್ಣಿನ ಆತಂಕದ ದನಿ ಕೇಳುತ್ತಲೇ ಕುರ್ಚಿಯ ತುದಿಗೆ ಕುಳಿತು ಆಲಿಸಿದ!

* * *

ಇನ್ಸ್‌ಪೆಕ್ಟರ್ ರಾಜಧಾನಿ ಅತ್ತ ಕಡೆಯಿಂದ ಆತಂಕದ ದನಿಯನ್ನು ಕೇಳುತ್ತಲೇ ಕರೆಗಂಟೆಯನ್ನೊತ್ತಿ ಪಿಸಿಯನ್ನು ಎಚ್ಚರಿಸಿದ. ಅಲ್ಲಿಯೇ ಕೈ ಕಟ್ಟಿ ನಿಂತಿದ್ದ ಪಿಸಿ ಸಾರಂಗ ವಿಧೇಯಕನಂತೆ ತಲೆ ಬಾಗಿಸಿದ.

'ಹೇಳಿಮ್ಮಾ, ಏನಾಯ್ತು?' ಅತ್ತ ಕಡೆಯಿಂದ ಮೂಗಿನ ನೀರನ್ನು ಒಳಗೆ ಸೆಳೆದುಕೊಂಡಂತೆ ಸದ್ದು ಕೇಳಿತು.

## ದುಡಿಮೆಯೇ ದೇವರು

ಬೆಳಿಗ್ಗೆ ಅವಸರದಲ್ಲಿ ಕಚೇರಿಗೆ
ಹೊರಟ ಮಗನಿಗೆ ಕೇಳಿದೆ,
'ದೇವರಿಗೆ ನಮಸ್ಕರಿಸಿದೆಯಾ?'
ಅದಕ್ಕೆ ಆತ ಉತ್ತರಿಸಿದ,
'ದುಡಿಮೆಯೇ ದೇವರು ಎಂದು
ನೀನೇ ಹೇಳಿದ್ದೆಯಲ್ಲ..!'

**–ಡಾ.ವಿನಯ ಶ್ರೀನಿವಾಸ್**



ಈಶ್ವರ

'ಸಾರ್, ನಾನು ಕಾಶಮ್ಮ ಮಾತಾಡ್ತಿದ್ದೀನಿ. ಇವತ್ತು ಒಂದು ಅನಾಮಧೇಯ ಪತ್ರ ಬಂದಿತ್ತು. ಅದನ್ನು ನಮ್ಮ ಹಿರಿ ಮಗಳು ಕಿತ್ತುಕೊಂಡು ಮನೆಯಿಂದ ಹೊರಗೆ ಹೋಗಿದ್ದಾಳೆ. ಅವ್ರು ಬೇರೆ ಮನೆಯಲ್ಲಿಲ್ಲ. ಅವಳು ಹೋಗಿ ಅರ್ಧ ದಿನವಾದರೂ ಇನ್ನೂ ಮರಳಿ ಬರ್ಲಿಲ್ಲ'

ಕಾಶಮ್ಮನಿಗೆ ಮೇನಕಾಳ ಬಗ್ಗೆ ಇರುವ ಅಭಿಪ್ರಾಯ ಅಧಿಕಾರಿಗೆ ತಿಳಿಯದ್ದೇನಲ್ಲ. ಮೇನಕಾ ಕಾಶಮ್ಮನಿಂದ ಆ ಕಾಗದವನ್ನು ತೆಗೆದುಕೊಂಡು ನೇರವಾಗಿ ಕಾಗದ ಬರೆದ ವ್ಯಕ್ತಿಯನ್ನು ಹುಡುಕಿಕೊಂಡು ಹೊರಟಿದ್ದಾಳೆ. ಆದರೆ ಆ ವ್ಯಕ್ತಿ ಅವಳಿಗೆ ಗೋಚರವಾಗದೆ ಇಲ್ಲಿ ತನ್ನ ನೆರವು ಕೋರಿಕೊಂಡು ಬಂದಿದ್ದಾಳೆ. ಅವಳು ಮನೆಗೆ ಹಿಂದಿರುಗದಿರುವುದಕ್ಕೆ ಕಾಶಮ್ಮನಿಗೆ ಆತಂಕವಲ್ಲ. ಬದಲಾಗಿ ಆ ಪತ್ರವನ್ನು ತನ್ನಿಂದ ಕಸಿದುಕೊಂಡದ್ದಕ್ಕಾಗಿ ಹೀಗೆ ಆತಂಕದಿಂದ ಮಾತಾಡುತ್ತಿದ್ದಾಳೆ ಅನಿಸಿತು.

'ಸರೀಮ್ಮಾ, ನೀವೇನೂ ವರಿ ಮಾಡ್ಬೇಡಿ. ನಾನು ಅದನ್ನು ವಿಚಾರ್ಸಿಕೋತೀನಿ' ಅಧಿಕಾರಿ ಪಿಸಿಯತ್ತ ನೋಡಿ ಹೇಳಿದ.

'ನೋಡಪ್ಪಾ, ನಮ್ಮ ಬೈಕ್ ರೆಡಿ ಮಾಡು. ನಾವು ಸಿಟಿಯ ಹೊರಗೆ ಹೋಗೋ ಮೊದಲು ಫಾರ್ಮ್ ಹೌಸ್‌ಗೆ ಹೋಗಿ ಬರೋಣ'

ಇನ್ಸ್‌ಪೆಕ್ಟರ್‌ನ ಮಾತಿಗೆ ಪಿಸಿಯ ಮುಖ ಇನ್ನಷ್ಟು ಸಿಂಡರಿಸಿತು. ಫಾರ್ಮ್ ಹೌಸ್‌ನಲ್ಲಿ ಮತ್ತೇನು ರಾದ್ಧಾಂತ ಕಾದಿದೆಯೋ ಅನಿಸಿತು. ಅವನಿಗೆ ಎದುರಾಡದೆ `ಎಸ್ ಸಾರ್' ಅಂದು ಹೊರಗೆ ಬಂದ. ಬೈಕ್ ಅನ್ನು ತಂದು ಠಾಣೆಯ ಮುಂದೆ ಸಜ್ಜುಗೊಳಿಸಿ ನಿಲ್ಲಿಸಿದ.

ಇನ್ಸ್‌ಪೆಕ್ಟರ್ ರಾಜಧಾನಿ ತನ್ನ ವಾಕಿ ಟಾಕಿಯೊಂದಿಗೆ ಹೊರಗೆ ಬಂದ. ಪಿಸಿ ತಯಾರಾಗಿ ನಿಂತಿದ್ದ. ಅವನ ಕೈಯಲ್ಲಿ ಫೈಲನ್ನು ಕೊಟ್ಟು ತಾನು ಬೈಕ್ ಏರಿ ಸೆಲ್ಫ್ ಒತ್ತಿದ. ಪಲ್ಸರ್ ಸದ್ದು ಹೊರಡಿಸಿತು. ಪಿಸಿ ಸಾರಂಗ ಬೈಕನ್ನೇರಿ ಕುಳಿತ. ಬೈಕ್ ಮುಂದಕ್ಕೆ ಹಾರಿ ಫಾರ್ಮ್ ಹೌಸ್‌ನತ್ತ ಓಡಿತು.

ಈ ಬಾರಿ ಮಣ್ಣಿನ ರಸ್ತೆಗೆ ಬೈಕ್ ಇಳಿಸಿ ನಿಧಾನವಾಗಿ ಓಡಿಸುತ್ತಾ ಇನ್ಸ್‌ಪೆಕ್ಟರ್ ನೇರವಾಗಿ 'ಮೇನಕಾ'ದ ಗೇಟಿನ ಎದುರು ನಿಲ್ಲಿಸಿದ.

ಮೇನಕಾಕ್ಕೆ ಸೂರ್ಯನ ಬಿಸಿಲು ಅಡ್ಡಲಾಗಿ ಅದೆಷ್ಟೋ ಸಮಯ ಕಳೆದಂತೆ ತಂಪಾಗಿತ್ತು. ಎತ್ತರದ ಕಬ್ಬಿಣದ ಗೇಟನ್ನು ತೆರೆದು ಇಬ್ಬರೂ ಒಳಗಡಿಯಿಟ್ಟಾಗ ಕೆನಲ್ ಒಳಗಿದ್ದ ನಾಯಿಗಳೆರಡು ಬೊಗಳಲಾರಂಭಿಸಿದವು.

ಸಾರಂಗ ಅವುಗಳನ್ನು ಸುಮ್ಮನಿರುವಂತೆ ಗದರಿಸಿದ. ಅವುಗಳ ಒದರಾಟ ಇನ್ನೂ ಹೆಚ್ಚಾಯಿತು. ಇನ್ಸ್‌ಪೆಕ್ಟರ್ ಪಿಸಿಗೆ ಸುಮ್ಮನಿರುವಂತೆ ಹೇಳಿ ಕರೆಗಂಟೆ ಒತ್ತುವಂತೆ ಸಂಜ್ಞೆ ಮಾಡಿದ. ಪಿಸಿ ಕರೆಗಂಟೆಯೊತ್ತಿದ. ಕೆಲಸದಾಳೊಬ್ಬ ಹೆಗಲಿನಲ್ಲಿಳಿಸಿದ ಬಟ್ಟೆಗೆ ಕೈ ಒರೆಸುತ್ತಾ ಒಳಗೆ ಬಂದು ಬಾಗಿಲು ತೆರೆದ. ಎದುರಿಗೆ ನಿಂತಿದ್ದವರಿಬ್ಬರತ್ತಲೂ ಬೆದರಿಕೆಯ ನೋಟ ಹರಿಸಿದ. ಇನ್ಸ್‌ಪೆಕ್ಟರ್ ಅವನನ್ನು ಪ್ರಶ್ನಿಸಿದ.

'ಎಲ್ಲಿ ನಿಮ್ಮ ಚಿಕ್ಕಮ್ಮಾರು?' ಆಳು ತಬ್ಬಿಬ್ಬಾಗಿ ಅವನತ್ತ ನೊಡಿದವನೆ ಕೈ ಹಿಚುಕಿಕೊಂಡು ಎರಡು ಹೆಜ್ಜೆ ಹಿಂದಕ್ಕೆ ಸರಿದ.

'ಸಾರ್, ಅವ್ರು ಮಹಡಿ ಮೇಲಿದ್ದಾರೆ'

ಕೆಲಸದಾತನ ಮಾತು ಕೇಳಿ ಮೇಲಿನ ಮಹಡಿಯಲ್ಲಿರುವವರು ಯಾರೆನ್ನುವುದು ಊಹಿಸಿದ ಇನ್ಸ್‌ಪೆಕ್ಟರ್. ಅವನಿಗೆ ಕಾಶಮ್ಮನ ಜೊತೆಗೆ ಮಾತಾಡುವುದಕ್ಕಿಂತಲೂ ಮೇನಕಾಳ ಜೊತೆಗೆ ಮಾತನಾಡುವ ಅವಶ್ಯಕತೆಯಿತ್ತು. ಬಂದ ಕಾರ್ಯ ಕೈಗೂಡದೆಂದೆನಿಸಿದರೂ ಅದನ್ನು ತೋರಿಸಿಕೊಳ್ಳಲಿಲ್ಲ.

'ಸರಿ, ಅವರನ್ನು ಕರೆ. ನಮಗೆ ಸ್ವಲ್ಪ ಮಾತಾಡುವುದಿದೆ' ಪಿಸಿಯ ಕೈಯಲ್ಲಿದ್ದ ಫೈಲನ್ನು ತೆಗೆದುಕೊಂಡು ಬಿಡಿಸಿದ ಅಧಿಕಾರಿ ರಾಜಧಾನಿ. ಪಿಸಿ ಸುಮ್ಮನೆ ಅವನ ಕೈಯಲ್ಲಿದ್ದ ಫೈಲ್ನೊಳಗೆ ಕಣ್ಣಾಡಿಸಿದ.

ಕೆಲಸದಾಳು ಕಾಶಮ್ಮನನ್ನು ಕರೆಯಲು ಮಹಡಿಯೇರಿದ. ಅಷ್ಟರಲ್ಲಿ ಅವರಿಬ್ಬರು ಸೋಫಾದಲ್ಲಿ ಕುಳಿತರು.

ಒಂದೆರಡು ನಿಮಿಷದಲ್ಲಿಯೇ ಕಾಶಮ್ಮ ಸ್ಥೂಲ ದೇಹವನ್ನು ಹಿಡಿದುಕೊಂಡು ದುಡದುಡನೆ ಮೆಟ್ಟಲಿಳಿದು ಬಂದು ಪೊಲೀಸ್ ಅಧಿಕಾರಿ ಮತ್ತು ಪೇದೆಯ ಎದುರಿಗೆ ಕುಳಿತು ಏದುಸಿರಿಟ್ಟರು.

'ಅಮ್ಮಾ, ನೀವು ಸಾವರಿಸಿಕೊಳ್ಳಿ. ನಮಗೆ ನೀವು ಫೋನ್ ಮಾಡಿದಿರಲ್ಲವೆ ಅದಕ್ಕಾಗಿಯೇ ಇಲ್ಲಿಗೆ ಬಂದೆವು. ಮೇನಕಾ ಕೂಡ ಬಂದಿಲ್ಲ ಅಂತೀರಿ. ಅದಕ್ಕೆ